ಶ್ರೀ ಜಿ.ರಾಮದಾಸ್: ಮಾನ್ಯ ಅಧ್ಯಕ್ಷರೇ, ಕಳೆದ ಮೂರು ವರ್ಷಗಳಿಂದಲು ಸಹ ಇದೇ ರೀತಿಯ ಮಾತು ಕೇಳಿ ಬರುತ್ತಿದೆ. ಯಾವಾಗ ಈ ಯೋಜನೆಯನ್ನು ಜಾರಿಗೆ ತರುತ್ತೀರಿ ಎಂದು ಕಟಾಫ್ ಡೇಟ್ ಹೇಳಬೇಕು.

ಡಾ॥ ಹೆಚ್.ಸಿ.ಮಹದೇವಪ್ಪ: ಮಾನ್ಯ ಅಧ್ಯಕ್ಷರೇ, ಇದು ರಾಷ್ಟ್ರೀಯ ಯೋಜನೆ ಅಡಿಯಲ್ಲಿ ಮಂಜೂರಾಗಿರುವುದರಿಂದ ನಿರ್ದಿಷ್ಟವಾದ ಡೇಟ್, ಸಮಯವನ್ನು ಹೇಳುವುದಕ್ಕೆ ಕಷ್ಟವಾಗುತ್ತದೆ. ನನ್ನ ಉದ್ದೇಶಕ್ಕೆ ಮಾನ್ಯ ಸದಸ್ಯರ ಬೆಂಬಲ ವ್ಯಕ್ತಪಡಿಸಿದ್ದಾರೆ. ಖಂಡಿತವಾಗಿ ಈ ಕೆಲಸವನ್ನು ಮಾಡುತ್ತೇವೆ.

ವೈದ್ಯಕೀಯ ಶಿಕ್ಷಣಕ್ಕೆ ಪ್ರವೇಶ ಪಡೆದ ವಿದ್ಯಾರ್ಥಿಗಳು

310 (2031)

ಶ್ರೀ ಡಿ.ಆರ್.ಪಾಟೀಲ್ (ಗದಗ್): ಮಾನ್ಯ ವೈದ್ಯಕೀಯ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಸಿ.ಇ.ಟಿ. ನಂತರ 1998-99ನೇ ಸಾಲಿನಲ್ಲಿ ವೈದ್ಯಕೀಯ ಶಿಕ್ಷಣ ಪ್ರವೇಶ ಪಡೆದ ವಿದ್ಯಾರ್ಥಿಗಳ ಸಂಖ್ಯೆ ಎಷ್ಟು?

ಆ) ವೈದ್ಯಕೀಯ ಪ್ರವೇಶ ಪಡೆದವರಲ್ಲಿ ಬೆಂಗಳೂರು ನಗರ ಹಾಗೂ ಗ್ರಾಮಾಂತರ ಜಿಲ್ಲೆಯದು 'ಸಿಂಹಪಾಲು' ಆಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ?

ಇ) ವೈದ್ಯಕೀಯ ಶಿಕ್ಷಣ ಪ್ರವೇಶ ಪಡೆಯುವಲ್ಲಿ ಅಸಮಾನತೆ ಇರುವುದನ್ನು ಸರಿಪಡಿಸಲು ವಿಭಾಗವಾರು ಆಯ್ಕೆ ಪ್ರಕ್ರಿಯೆ ಪ್ರಾರಂಭಿಸುವುದಾಗಿ ಸರ್ಕಾರ ಈ ಮೊದಲು ನೀಡಿದ ಭರವಸೆ ಈಡೇರಿಸದಿರಲು ಕಾರಣಗಳೇನು?

ಈ) ವೈದ್ಯಕೀಯ ಶಿಕ್ಷಣಕ್ಕೆ ಪ್ರವೇಶ ನೀಡುವಲ್ಲಿ ಆಗುತ್ತಿರುವ ಪ್ರಾದೇಶಿಕ ಅಸಮಾನತೆ ನಿವಾರಿಸಲು ಸರ್ಕಾರ ಕೈಗೊಳ್ಳಲು ಉದ್ದೇಶಿಸಿರುವ ಕ್ರಮಗಳೇನು?

ಡಾ. ಎಂ.ಶಂಕರನಾಯಕ್ (ವೈದ್ಯಕೀಯ ಶಿಕ್ಷಣ ರಾಜ್ಯ ಸಚಿವರು):

ಅ) 1998-99ನೇ ಸಾಲಿನಲ್ಲಿ 1680 ಅಭ್ಯರ್ಥಿಗಳು ಪ್ರವೇಶ ಪಡೆದಿರುತ್ತಾರೆ.

ಆ) ವೈದ್ಯಕೀಯ ರ್‍ಯಾಂಕ್ ಪಡೆದ ಮತ್ತು ಸೀಟು ಪಡೆದವರ ತುಲನಾತ್ಮಕ ಅಂಕಿ ಅಂಶ ಈ ಕೆಳಕಂಡಂತೆ ಇದೆ.

	ಜಿಲ್ಲೆಯ ಹೆಸರು	ಪಿ.ಸಿ.ಬಿ ವಿಷಯ ಗಳಡಿ ರ್‍ಯಾಂಕ್ ಪಡೆದವರ ಸಂಖ್ಯೆ	ವೈದ್ಯಕೀಯ ಸೀಟು ಪಡೆದವರ ಸಂಖ್ಯೆ
1)	ಬೆಂಗಳೂರು ನಗರ	9344	367
2)	ಬೆಂಗಳೂರು ಗ್ರಾಮಾಂತರ	723	32
3)	ಇತರೆ ಜಿಲ್ಲೆಗಳು	15955	1067

ಮೇಲ್ಕಂಡ ಅಂಕಿ ಅಂಶಗಳಿಂದ ಬೆಂಗಳೂರು ನಗರ ಮತ್ತು ಬೆಂಗಳೂರು ಗ್ರಾಮಾಂತರ ಜಿಲ್ಲೆಗಳ ಮೆಡಿಕಲ್ ರ್‍ಯಾಂಕ್ ಪಡೆದ 10, 067 ಅಭ್ಯರ್ಥಿಗಳ ಪೈಕಿ 399 ಅಭ್ಯರ್ಥಿಗಳು ಮೆಡಿಕಲ್ ಸೀಟು ಪಡೆದಿದ್ದಾರೆ. ಆದರೇ ಇತರೆ ಜಿಲ್ಲೆಗಳ ಮೆಡಿಕಲ್ ರ್‍ಯಾಂಕ್ ಪಡೆದ 15955 ಅಭ್ಯರ್ಥಿಗಳ ಪೈಕಿ 1067 ಅಭ್ಯರ್ಥಿಗಳು ಬೆಂಗಳೂರು ಜಿಲ್ಲೆಯ ಅಭ್ಯರ್ಥಿಗಳು ವೈದ್ಯಕೀಯ ಸೀಟು ಪಡೆದಿದ್ದಾರೆ. ಈ ಅಂಕಿಅಂಶಗಳಿಂದಾಗಿ ಬೆಂಗಳೂರು ಜಿಲ್ಲೆಯ ಅಭ್ಯರ್ಥಿಗಳು ವೈದ್ಯಕೀಯ ಸೀಟು ಪಡೆಯುವಲ್ಲಿ ಸಿಂಹಪಾಲು ಹೊಂದಿರುವುದಿಲ್ಲವೆಂದು ವ್ಯಕ್ತವಾಗುತ್ತದೆ. ಅಲ್ಲದೆ ಬೆಂಗಳೂರಿನ ವಿದ್ಯಾರ್ಥಿ ಸಮುದಾಯವು ರಾಜ್ಯದ ಎಲ್ಲಾ ಕಡೆಗಳಿಂದ ಪ್ರತಿನಿಧಿಸುತ್ತಾರೆ. ಆದರೆ, ನೇಟೀವ್ ಅಭ್ಯರ್ಥಿಗಳು ಸಾಮಾನ್ಯವಾಗಿ ಜಿಲ್ಲೆಯನ್ನು ಪ್ರತಿನಿಧಿಸುತ್ತಾರೆ.

ಇ) ಭರವಸೆ ಈಡೇರಿಸುವ ಬಗ್ಗೆ ಭಾರತ ಸಂವಿಧಾನದಲ್ಲಿ ವಿಶೇಷ ಅವಕಾಶ ಕಲ್ಪಿಸಲು ತಿದ್ದುಪಡಿ ತರುವಂತೆ ಸಿಬ್ಬಂದಿ ಆಡಳಿತ ಸುಧಾರಣೆ ಇಲಾಖೆಯು ಕೇಂದ್ರ ಸರ್ಕಾರವನ್ನು ಕೋರಿದೆ.

ಈ) ಮೇಲಿನ ಉತ್ತರದಿಂದ ಈ ಪ್ರಶ್ನೆ ಉದ್ಭವಿಸುವುದಿಲ್ಲ.

ಶ್ರೀ ಡಿ.ಆರ್.ಪಾಟೀಲ್: ಮಾನ್ಯ ಅಧ್ಯಕ್ಷರೇ, ಕಳೆದ ಎರಡು ವರ್ಷಗಳಿಂದ ನಾವು ವಿಭಾಗವಾರು ಮೆಡಿಕಲ್ ಮತ್ತು ಇಂಜಿನಿಯರಿಂಗ್‌ಗಳಲ್ಲಿ ಅಡ್ಮಿಷನ್ಸ್ ಕೊಡಬೇಕೆಂದು ಸರ್ಕಾರವನ್ನು ಕೇಳುತ್ತಿದ್ದೇವೆ, ಸರ್ಕಾರದವರು ನಮಗೆ ಭರವಸೆಯನ್ನು ಕೊಟ್ಟೇ ಕೊಡುತ್ತಾರೆ. ಆದರೆ ಇದುವರೆಗೂ ಏನೂ ಕೆಲಸ ಮಾಡಿಲ್ಲ. ದಯಮಾಡಿ ವಿಭಾಗವಾರು ಪಿ.ಯು.ಸಿ ಬೋರ್ಡ್ ಮಾಡಿ, ಪರೀಕ್ಷೆಯನ್ನು ನಡೆಸಿ ಅಲ್ಲಿ ಸಿ.ಇ.ಟಿ. ಪರೀಕ್ಷೆಯನ್ನು ಮಾಡಿ ಸೀಟು ಹಂಚಿಕೆ ಮಾಡುವುದರಲ್ಲಿ ಏನು ತೊಂದರೆ ಇದೆ? ದಯಮಾಡಿ ತಿಳಿಸಿ?

ಡಾ: ಎಂ.ಶಂಕರನಾಯಕ್ (ಮಾನ್ಯ ವೈದ್ಯಕೀಯ ಶಿಕ್ಷಣ ರಾಜ್ಯ ಸಚಿವರು): ಮಾನ್ಯ ಅಧ್ಯಕ್ಷರೇ, ಅನೇಕ ಸಂದರ್ಭದಲ್ಲಿ ಹೇಳಿದ್ದೇವೆ. ರಾಜ್ಯ ಸರ್ಕಾರ ಅದನ್ನು ಮಾಡುವ ಅಧಿಕಾರ ಇಲ್ಲ. ರಾಷ್ಟ್ರಪತಿಗಳಿಂದ ಅದಕ್ಕೆ ಅಂಗೀಕಾರ ಪಡೆದುಕೊಳ್ಳಬೇಕಾಗುತ್ತದೆ. ಅದಕ್ಕಾಗಿ ನಾವು ಸಚಿವ ಸಂಪುಟದಲ್ಲಿ ಒಂದು ನಿರ್ಣಯವನ್ನು ಮಾಡಿ, ಸರ್ಕಾರದ ವತಿಯಿಂದ ಇದಕ್ಕೆ ತಮ್ಮ ಒಪ್ಪಿಗೆಯನ್ನು ಕೊಡಬೇಕೆಂದು ಹೇಳಿ, ರಾಷ್ಟ್ರಪತಿಗಳಿಗೆ ಕಳುಹಿಸಿಕೊಟ್ಟಿದ್ದೇವೆ. ಅದು ಬಂದನಂತರ ನಾವು ಪ್ರೋಸೆಸ್ ಮಾಡುತ್ತೇವೆಂದು ನಾನು ಕಳೆದ ಸಲ ಸಹ ಹೇಳಿದ್ದೇನೆ. ಅಲ್ಲಿಂದ ಬಂದ ತಕ್ಷಣ ನಾವು ವಿಭಾಗವಾರು ಮಾಡುವುದಕ್ಕೆ ಪ್ರಯತ್ನ ಮಾಡುತ್ತೇವೆ.

ಶ್ರೀ ಡಿ.ಆರ್.ಪಾಟೀಲ್: ಮಾನ್ಯಅಧ್ಯಕ್ಷರೇ ವಿಭಾಗವಾರು ಮಿಾಸಲಾತಿ ಕೊಡಬೇಕಾದರೆ ಅದಕ್ಕೆ ರಾಷ್ಟ್ರಪತಿಗಳ ಒಪ್ಪಿಗೆ ಬೇಕಾಗುತ್ತದೆ. ಅದಕ್ಕೆ ತಿದ್ದುಪಡಿಗಳು ಬೇಕಾಗುತ್ತದೆ. ನೀವು ವಿಭಾಗವಾರು ಒಂದು ಪಿ.ಯು.ಸಿ ಬೋರ್ಡ್ ಮಾಡಿ ವಿಭಾಗವಾರು ಸಿ.ಇ.ಟಿ.ಪರೀಕ್ಷೆ ಮಾಡಿದರೆ ಸಾಕು, ಇದನ್ನು ಸರ್ಕಾರ ಮಾಡುವ ಕೆಲಸ. ರಾಷ್ಟ್ರಪತಿಗಳಿಗೆ ಇದು ಹೋಗಬೇಕಾಗಿಲ್ಲ. ನಾವು ನಮ್ಮ ಕಾಲೇಜಿನಲ್ಲಿ ಸೀಟು ಹೇಗೆ ಹಂಚಿಕೆ ಮಾಡಿಕೊಳ್ಳಬೇಕೆನ್ನುವುದು ಅದು ನಮಗೆ ಬಿಟ್ಟಿದ್ದು. ನೀವು ಮಿಾಸಲಾತಿ ಮಾಡುತ್ತಿದ್ದರೆ ಆಗಬಹುದು. ನಿಮಗೆ ರಾಷ್ಟ್ರಪತಿಗಳ ಒಪ್ಪಿಗೆ ಬೇಕಾಗುತ್ತದೆ. ಇದು ಆಡಳಿತಾತ್ಮಕ ವ್ಯವಸ್ಥೆ.

ಡಾ: ಎಂ.ಶಂಕರನಾಯಕ್: ಮಾನ್ಯ ಅಧ್ಯಕ್ಷರೇ, ಎಲ್ಲವನ್ನು ಚರ್ಚೆ ಮಾಡಿ, ಪರಿಗಣಿಸಿ ಆ ತರಹ ಮಾಡುವುದಕ್ಕೆ ಆಗುವುದಿಲ್ಲ ಎನ್ನುವ ಉದ್ದೇಶದಿಂದ ಬೇರೆ ರಾಜ್ಯಗಳಲ್ಲಿಯೂ ಅದನ್ನು ಮಾಡಿರತಕ್ಕಂಥಾದ್ದನ್ನು ನೋಡಿ, ಅವರು ರಾಷ್ಟ್ರಪತಿಗಳ ಒಪ್ಪಿಗೆಯನ್ನು ಪಡೆದು ಮಾಡಿರತಕ್ಕಂಥ ಸಂದರ್ಭದಲ್ಲಿ ಅವರ ಒಪ್ಪಿಗೆ ಇಲ್ಲದೆ ಮಾಡುವುದಕ್ಕೆ ಆಗುವುದಿಲ್ಲ ಎನ್ನುವ ಅಭಿಪ್ರಾಯವನ್ನು ಕಾನೂನು ಇಲಾಖೆಯವರು ಕೊಟ್ಟ ಮೇಲೆ ನಾವು ಸರ್ಕಾರದ ವತಿಯಿಂದ ಅದನ್ನು ಕಳುಹಿಸಿದ್ದೇವೆ.

ಶ್ರೀ ಜಗದೀಶ ಶೆಟ್ಟರ್: ಮಾನ್ಯ ಅಧ್ಯಕ್ಷರೇ, ಇದು ತಕ್ಷಣ ಆಗಬೇಕಾದಂತಹ ಕೆಲಸ. ಏಕೆಂದರೆ ಆ ಭಾಗದ ಜನರಿಗೆ ಬಹಳ ಅನ್ಯಾಯವಾಗುತ್ತಿದೆ. ಈಗ ತಾವು ರಾಷ್ಟ್ರಪತಿಗಳ ಒಪ್ಪಿಗೆ ಬೇಕು ಎಂದು ಹೇಳುತ್ತಿದ್ದೀರಿ. ಅದು ಇಲ್ಲದೇ ಸರ್ಕಾರ ಆಡಳಿತಾತ್ಮಕವಾಗಿ ಏನು ಮಾಡಬಹುದೋ ಅದನ್ನು ಮಾಡಿದರೆ ಸಾಕು. ಅಲ್ಲಿರತಕ್ಕಂಥ ಜನರ ಭಾವನೆಗಳಿಗೆ ಮತ್ತು ಬೇರೆ ಬೇರೆ ಜಿಲ್ಲೆಗಳ ವಿದ್ಯಾರ್ಥಿಗಳಿಗೆ ಅನ್ಯಾಯವಾಗುತ್ತಿರುವ ದೃಷ್ಟಿಯಿಂದ ಸರ್ಕಾರ ಆದಷ್ಟು ಬೇಗ ಕ್ರಮ ತೆಗೆದುಕೊಳ್ಳಬೇಕೆಂದು ನಾನು ವಿನಂತಿ ಮಾಡಿಕೊಳ್ಳುತ್ತಿದ್ದೇನೆ.

ಶ್ರೀ ವೈಜನಾಥ ಪಾಟೀಲ್: ಮಾನ್ಯ ಅಧ್ಯಕ್ಷರೇ, ಮಾನ್ಯ ಸಚಿವರು ಮಾತನಾಡುತ್ತಾ ರಾಷ್ಟ್ರಪತಿಗಳ ಒಪ್ಪಿಗೆಗೆ ಪತ್ರವನ್ನು ಬರೆದಿದ್ದೇವೆಂದು ಹೇಳಿದರು. ಅದರ ಪ್ರತಿಯನ್ನು

ಈ ಸಭೆಯ ಮುಂದೆ ಇಡಬಹುದೇ? ಎಂದು ಬರೆದಿದ್ದಾರೆ., ಏನು ಬರೆದಿದ್ದಾರೆ ಎನ್ನುವುದನ್ನು. ಅವರು ಪತ್ರ ಬರದೇ ಇಲ್ಲ.

ಡಾ: ಎಂ.ಶಂಕರನಾಯಕ್: ಮಾನ್ಯ ಅಧ್ಯಕ್ಷರೇ, ಅವರು ಏನು ಕಾಳಜಿಯನ್ನು ವ್ಯಕ್ತಪಡಿಸಿದ್ದಾರೆ ಅನೇಕ ಜಿಲ್ಲೆಗಳಿಗೆ ಅನ್ಯಾಯವಾಗುತ್ತದೆಂದು ಹೇಳಿ, ಆ ರೀತಿ ಯಾವ ಜಿಲ್ಲೆಗೆ ಅನ್ಯಾಯವಾಗಿದೆ ಎನ್ನುವುದು ನಮ್ಮ ಗಮನಕ್ಕೆ ಬಂದಿಲ್ಲ. ಕಳೆದ ವರ್ಷ ನಮ್ಮ ರಾಜ್ಯದಲ್ಲಿ ಏನು ಅಡ್ಮಿಶನ್ಸ್ ಆಗಿದೆ ಮೆಡಿಕಲ್ ಕಾಲೇಜುಗಳಲ್ಲಿ ಆ ಲಿಸ್ಟ್ ತೆಗೆದುಕೊಂಡಾಗ ಹೆಚ್ಚಿಗೆ ಬೆಂಗಳೂರಿನಲ್ಲಿ ಈ ಪಾಪ್ಯುಲೇಶನ್‌ಗೆ ಸಿಕ್ಕಿರತಕ್ಕಂಥ ಸೀಟು 367 ಮಾತ್ರ. ಬೆಂಗಳೂರು ಗ್ರಾಮಾಂತರಕ್ಕೆ ಸಿಕ್ಕಿರುವಂಥಾದ್ದು 32. ಹೆಚ್ಚು ಸೀಟು ಸಿಕ್ಕಿರತಕ್ಕಂಥಾದ್ದು ಗುಲ್ಬರ್ಗ ಜಿಲ್ಲೆಗೆ. 83 ಸೀಟು ಗುಲ್ಬರ್ಗ ಜಿಲ್ಲೆ ವಿದ್ಯಾರ್ಥಿಗಳಿಗೆ ಸಿಕ್ಕಿದೆ. ಅದನ್ನು ಬಿಟ್ಟರೆ ಎರಡನೇ ಸ್ಥಾನ ಕೋಲಾರ ಜಿಲ್ಲೆಗೆ 75. ಆಮೇಲೆ ದಕ್ಷಿಣ ಕನ್ನಡ ಜಿಲ್ಲೆಗೆ 72. ಬಳ್ಳಾರಿ ಜಿಲ್ಲೆಗೆ 64. ಬೆಳಗಾಂಗೆ 70. ಜಿಲ್ಲಾವಾರು ತೆಗೆದುಕೊಂಡರೆ ಅನ್ಯಾವಾಗಿರತಕ್ಕಂಥಾದ್ದು ಈ ಭಾಗದ ಜನರಿಗೆ ಕಾಣುವುದಿಲ್ಲ. ಅದರಲ್ಲೂ ಮಂಡ್ಯ, ಮೈಸೂರು, ಹಾಸನ, ಹಾವೇರಿ, 18, ಉಡುಪಿ 47, ತುಮಕೂರು 76 ಸೀಟು, ರಾಯಚೂರು 26, ಮೈಸೂರು 62 ಮಂಡ್ಯ 37. ಹಾವೇರಿ 18, ಹಾಸನ 52, ಗದಗ್ ಹೊಸ ಜಿಲ್ಲೆಯಾಗಿರುವುದರಿಂದ ಅದು 21. ದಾವಣಗೆರೆ 37 ಸೀಟು ಚಿಕ್ಕಮಗಳೂರು 24 ಈ ತರಹ ಇದೆ. ಜಾಸ್ತಿ ಹೆಚ್ಚು ಸೀಟು ತೆಗೆದುಕೊಂಡಿರತಕ್ಕಂಥಾದ್ದು ಜಿಲ್ಲಾವಾರು ತೆಗೆದುಕೊಂಡಾಗ ಬೆಳಗಾಂ, ಗುಲ್ಬರ್ಗ ಧಾರವಾಡ ಜಿಲ್ಲೆಗಳಿಗೆ ಸೇರಿದೆ. ಇದರಲ್ಲಿ ಅನ್ಯಾಯವಾಗಿರುವುದು ಕಂಡುಬರುವುದಿಲ್ಲ.

ಶ್ರೀ ಮಲ್ಲಿಕಾರ್ಜುನ ಖರ್ಗೆ: ಮಾನ್ಯ ಅಧ್ಯಕ್ಷರೇ, ಆದರೆ, ಅವರಿಗೂ ಏಕೆ ಅನ್ಯಾಯವಾಗಬೇಕು. ಬೆಂಗಳೂರು ಗ್ರಾಮಾಂತರ ಜಿಲ್ಲೆಯೇ ಆಗಿರಲಿ. ಅಥವಾ ನಿಮ್ಮ ಉಡುಪಿ ತೆಗೆದುಕೊಳ್ಳಿ. ಬೇರೆಯವರಿಗೂ ಅನ್ಯಾಯವಾಗುವುದು ಬೇಡ. ಅದಕ್ಕೆ ನೀವು ಡಿವಜನ್ ವೈಜ್ ಪಿ.ಯು.ಸಿ ಪರೀಕ್ಷೆಯನ್ನು ನಡೆಸಿ, ಬೋರ್ಡ್ ಮಾಡಿದರೆ ರಾಷ್ಟ್ರಪತಿಗಳ ಒಪ್ಪಿಗೆಯೂ ಬೇಕಾಗುವುದಿಲ್ಲ. ಒಂದು ಆಡಳಿತಾತ್ಮಕವಾದ ಆರ್ಡರ್ ಸಾಕು. ನಾಲ್ಕು ವಿಭಾಗಳಲ್ಲಿ ನಾಲ್ಕು. ಅಲ್ಲಿಲ್ಲಿಯೇ ಸೆಲೆಕ್ಷನ್ಸ್ ಮಾಡಿದರೆ ಯಾವ ತಂಟೆಯೂ ಇಲ್ಲ. ಸಂವಿಧಾನಕ್ಕೆ ತಿದ್ದುಪಡಿ ತಂದಾಗ ಮಾತ್ರ, ರಾಷ್ಟ್ರಪತಿಗಳ ಒಪ್ಪಿಗೆ ಬೇಕು. ಸಂವಿಧಾನ ತಿದ್ದುಪಡಿಯನ್ನು ನಾವು ಕೇಳುತ್ತಿಲ್ಲ. ಬರೀ ಒಂದು ಆಡಳಿತಾತ್ಮಕವಾದ ಆರ್ಡರ್ ಮಾಡಿ ಕನ್‌ವಿನಿಯಂಟ್ ಆಗಿ 4 ಡಿವಿಜನ್‌ಗಳಲ್ಲಿ ನಾಲ್ಕು ಬೋರ್ಡ್‌ಗಳು ಮಾಡಿ ಆ ಹುಡುಗರಿಗೆ ಮೆರಿಟ್ ಮೇಲೆ ಅಲ್ಲೇ ಸೆಲೆಕ್ಟ್ ಮಾಡಿ. ಯಾರಿಗೂ ಅನ್ಯಾಯವಾಗುವುದು ಬೇಡ. ಈ ಕಡೆ ಅನ್ಯಾಯವಾಗುವುದು ಬೇಡ, ಆ ಕಡೆಯೂ ಅನ್ಯಾಯವಾಗುವುದು ಬೇಡ.

ಡಾ: ಎಂ.ಶಂಕರ್‌ನಾಯಕ್: ಮಾನ್ಯ ಅಧ್ಯಕ್ಷರೇ, ಈಗ ಬೇರೆ ರಾಜ್ಯದಲ್ಲಿ ಏನು ಮಾಡಿದ್ದಾರೆ, ಆ ರೀತಿ ಮಾಡೋಣ ಎಂದು ನಾವು ಇದ್ದೇವೆ. ಈಗ ಪಕ್ಕದ ಆಂಧ್ರಪ್ರದೇಶದಲ್ಲಿ ಮಾಡಿದ್ದಾರೆ. ಅವರು ರಾಷ್ಟ್ರಪತಿಗಳ ಒಪ್ಪಿಗೆಯನ್ನು ಪಡೆದುಕೊಂಡಿದ್ದಾರೆ. ಮಹಾರಾಷ್ಟ್ರದಲ್ಲಿ ತಾವು ಹೇಳಿದ ತರಹ ಮಾಡಿದ್ದಕ್ಕೆ ಹೈಕೋರ್ಟಿನಲ್ಲಿ ಸ್ಟೇ ಕೊಟ್ಟರು. ನೀವು ಈ ತರಹ ಮಾಡಬಾರದು. ಮೆರಿಟ್ ಇರತಕ್ಕಂಥ ವಿದ್ಯಾರ್ಥಿಗಳಿಗೆ ಅನ್ಯಾಯವಾಗಬಾರದು, ಇದು ಸರಿಯಲ್ಲ, ನೀವು ಸ್ಟೇಟ್‌ವೈಜ್ ಮಾಡಬೇಕೆಂದು ಹೇಳಿ, ಅದರ ಮೇಲೆ ಮತ್ತೆ ಅವರು ಕೋರ್ಟಿನಲ್ಲಿ ಹೋದಾಗ ಅದು ಆಗದೇ ಇದ್ದಿದ್ದಕ್ಕೆ ಅವರು ಮತ್ತೆ ರಾಷ್ಟ್ರಪತಿಗಳ ಒಪ್ಪಿಗೆಯನ್ನು ಪಡೆದು ಪ್ರಾರಂಭ ಮಾಡಿದರು. ತಾವು ಹೇಳಿದ ರೀತಿ ಮಾಡಿದರೆ ಅದು ಏನಾಗುತ್ತದೆ ಅಂದರೆ ಅದು ಸಂವಿಧಾನಕ್ಕೆ ವಿರುದ್ಧವಾಗುತ್ತದೆ. ಆ ತರಹ ಮಾಡತಕ್ಕಂಥಾದ್ದು. ಅದರ ಮೇಲೆ ನಾವು ಸುಮಾರು ಒಂದು ವರ್ಷದ ಹಿಂದೆ ಸಚಿವ ಸಂಪುಟದಲ್ಲಿ ಒಂದು ನಿರ್ಣಯವನ್ನು ಮಾಡಿ ಪತ್ರವನ್ನು ಬರೆದಿದ್ದೇವೆ. ಆ ಕಾಗದದ ಪ್ರತಿಯನ್ನು ಬೇಕಾದರೆ ನಾನು ಮಾನ್ಯ ಸದಸ್ಯರಿಗೆ ಕಳುಹಿಸಿಕೊಡುತ್ತೇನೆ.

ಶ್ರೀ ವೈಜನಾಥ್ ಪಾಟೀಲ್: ಮಾನ್ಯ ಅಧ್ಯಕ್ಷರೇ, ಸಚಿವ ಸಂಪುಟದಲ್ಲಿ ಒಂದು ನಿರ್ಣಯ ಮಾಡಿದ್ದೇವೆಂದು ಹೇಳುವುದು ಸುಳ್ಳು. ಅದನ್ನು ಸಭೆಯ ಮುಂದೆ ಇಡಬೇಕು. ಆಮೇಲೆ ರಾಷ್ಟ್ರಪತಿಗಳಿಗೆ ಪತ್ರ ಬರೆದಿದ್ದೇವೆಂದು ಹೇಳುತ್ತಿರುವುದೂ ಸುಳ್ಳು. ಎಷ್ಟು ಹಸಿ ಸುಳ್ಳು ಹೇಳುತ್ತಿದ್ದೀರಿ ನೀವು?

ಶ್ರೀ ಜಗದೀಶ್ ಶೆಟ್ಟರ್: ಮಾನ್ಯ ಅಧ್ಯಕ್ಷರೇ ಮಾನ್ಯ ಸದಸ್ಯರು ಹೇಳಿದ್ದನ್ನು ತಾವು ಗಂಭೀರವಾಗಿ ತೆಗೆದುಕೊಳ್ಳಬೇಕು. ಸಚಿವ ಸಂಪುಟದಲ್ಲಿ ನಿರ್ಣಯ ಆಗಿಲ್ಲ, ರಾಷ್ಟ್ರಪತಿಗಳ ಒಪ್ಪಿಗೆಗೆ ಕಳುಹಿಸಿಲ್ಲವೆಂದು ಹೇಳುತ್ತಿದ್ದಾರೆ.

ಡಾ: ಎಂ.ಶಂಕರನಾಯಕ್: ಮಾನ್ಯ ಅಧ್ಯಕ್ಷರೇ, ನಾನು ಜವಾಬ್ದಾರಿಯಿಂದಲೇ ಹೇಳುತ್ತಿದ್ದೇನೆ. ಸಚಿವ ಸಂಪುಟದಲ್ಲಿ ನಿರ್ಣಯ ಆಗಿದೆ. ತಾವು ಅದರ ಪ್ರತಿಯನ್ನು ಕೇಳಿದ್ದೀರಿ ನಾನು ಅದನ್ನು ತಮಗೆ ಕಳುಹಿಸಿಕೊಡುತ್ತೇನೆ.

ಶ್ರೀ ವೈಜನಾಥ ಪಾಟೀಲ್: ಯಾವಾಗ? ಇವತ್ತು ಮಧ್ಯಾಹ್ನ ಕಳುಹಿಸಿಕೊಡುತ್ತೀರಾ?

ಶ್ರೀ ಅರಗ ಜ್ಞಾನೇಂದ್ರ: ಮಾನ್ಯ ಅಧ್ಯಕ್ಷರೇ ಆಡಳಿತ ಪಕ್ಷದ ಒಬ್ಬ ಶಾಸಕರು ಹೇಳುತ್ತಿದ್ದಾರೆ, ದಯವಿಟ್ಟು ಅದನ್ನು ಮನ್ನಣೆ ಮಾಡಿ.

ಶ್ರೀ ಎಸ್.ಸುರೇಶ್ ಕುಮಾರ್: ಮಾನ್ಯ ಅಧ್ಯಕ್ಷರೇ ನಾವೇನಾದರೂ ಮಾತನಾಡಿದರೆ ವಿರೋಧಪಕ್ಷದಲ್ಲಿರುವವರು, ಕಂಪ್ಲೆಂಟ್ ಮಾಡುವುದು, ದೂರು ಹೇಳುವುದು,

ಅಲಿಗೇಶನ್ಸ್ ಮಾಡುವುದೆಂದು ಹೇಳುತ್ತೀರಿ. ನಿಮ್ಮ ಪಕ್ಷದ ಸದಸ್ಯರೇ ಒಬ್ಬ ಹಿರಿಯ ಸದಸ್ಯರಾಗಿ ಸಚಿವರಾಗಿದ್ದಂತಹವರು, ಅವರು ಈ ಮಾತನ್ನು ಹೇಳುತ್ತಿರುವಾಗ ನೀವು ಹೇಗೆ ಕಾಂಟ್ರಡಿಕ್ಟ್ ಮಾಡುತ್ತೀರಾ? ಅವರು ಮುಖ್ಯಮಂತ್ರಿಗಳಾಗುವವರು, ನಿಮ್ಮ ಪಕ್ಷ ಅಧಿಕಾರಕ್ಕೆ ಬಂದರೆ.

ಡಾ: ಎಂ.ಶಂಕರನಾಯಕ್: ನಾನು ಸತ್ಯಾಂಶವನ್ನು ಹೇಳುತ್ತಿದ್ದೇನೆ. ಸಚಿವ ಸಂಪುಟದಲ್ಲಿ ನಾವು ನಿರ್ಣಯ ಮಾಡಿದ್ದೇವೆ. ಬೇಕಾದರೆ ಅದರ ಪ್ರತಿಯನ್ನು ನಾನು ಕೊಡುತ್ತೇನೆ.

ಶ್ರೀ ವೈಜನಾಥ ಪಾಟೀಲ್: ಸಚಿವ ಸಂಪುಟದ ನಿರ್ಣಯ, ಮತ್ತು ರಾಷ್ಟ್ರಪತಿಗಳಿಗೆ ಸರ್ಕಾರದವರು ಬರೆದಿರುವ ಕಾಗದದ ಪ್ರತಿ ಎರಡೂ ಕೊಡಬೇಕು.

ಡಾ: ಎ.ಬಿ.ಮಲಕರೆಡ್ಡಿ: ಮಾನ್ಯ ಅಧ್ಯಕ್ಷರೇ, ಕಳೆದ ಸಲ ಸರ್ಕಾರದ ಆದೇಶದ ಪ್ರಕಾರ ಡಿಸ್ಟ್ರಿಬ್ಯೂಶನ್ ಆಫ್ ಸೀಟ್ಸ್, ಈ ಪ್ರಾದೇಶಿಕ ಅಸಮತೋಲನ ಸಲುವಾಗಿ ಅನೇಕ ಸದಸ್ಯರು ಮಾತನಾಡಿದ್ದಾರೆ. ಆದರೂ ಕೂಡ ನನಗನಿಸುತ್ತದೆ. ಶೇಕ್ಸ್‌ಪಿಯರ್ ಒಂದು ಮಾತು ಹೇಳಿದ್ದಾರೆ. ದೇರ್ ಈಜ್ ಸಮ್ ಥಿಂಗ್ ಮ್ಯಾಡ್ ಇನ್ ದಿ ಸ್ಟೇಟ್ ಆಫ್ ಡೆನ್ಮಾರ್ಕ್ ಎಂದು. ಅದರಿಂದ ನಮ್ಮಲ್ಲಿ ನಾವು ಏನು ಮಾಡುತ್ತಿದ್ದೇವೆ, ಕರ್ನಾಟಕದಲ್ಲಿ ಡಿಸ್ಟ್ರಿಬ್ಯೂಶನ್ ಆಫ್ ಸೀಟ್ಸ್ ಬಗ್ಗೆ ಒಂದು ಮಾಹಿತಿ ಕೊಟ್ಟಿದ್ದೀರಿ. ಡಿಸ್ಟ್ರಿಬ್ಯೂಶನ್ ಆಫ್ ಸೀಟ್ಸ್ ಮೀನ್ಸ್ ಡಿಸ್ಟ್ರಿಬ್ಯೂಶನ್ ಅಕಾರ್ಡಿಂಗ್ ಟು ರಿಜರ್ವೇಶನ್. ಈ ರಿಜರ್ವೇಶನ್ ಪ್ರಕಾರ ಕ್ಯಾಟಗರಿಯನ್ನು ನಾನು ಓದಿ ಹೇಳುತ್ತೇನೆ. ಇಲ್ಲಿ ಏನು ತಪ್ಪಾಗಿದೆ ಎಂದು. ಕಳೆದ ಸಲ ಸೀಟ್ಸ್ ಕೊಟ್ಟರು. ಈ ಸಲ ಯಾವ ರೀತಿ ಸರ್ಕಾರದ ಆದೇಶ ಇಶ್ಯೂ ಮಾಡುತ್ತಾರೆಂದು ಗೊತ್ತಿಲ್ಲ. ಇನ್ನು ಟೇಬಲ್ ಮೇಲೆ ಇಟ್ಟಿಲ್ಲ. ಆದರೆ ಕೌನ್ಸಿಲಿಂಗ್ ನಡೆದಿದೆ. ಈಗ. ಹೌಸ್‌ನ ಟೇಬಲ್ ಮೇಲೆ ಆ ಕಾಗದ ಪತ್ರಗಳನ್ನು ಇನ್ನೂ ಇಟ್ಟಿಲ್ಲ. ಹೋದ ವರ್ಷದ್ದು ನಾನು ಹೇಳುತ್ತೇನೆ ಕೇಳಿ. ಫ್ರೀ ಸೀಟ್ಸ್ ಮತ್ತು ಆಲ್ ಇಂಡಿಯಾ ಖೋಟಾ, ಡಿಫೆನ್ಸ್ ಖೋಟಾ. Political sufferers' quota, sportsmen, NCC, Anglo-Indian, physically handicapped and then Urban quota and then rural quota. ಅರ್ಬನ್ ಕೋಟಾದಲ್ಲಿ ಕ್ಲಾರಿಫಿಕೇಶನ್ ಮಾಡಿದರೆ ಮೂರನೇ ಎರಡು ಭಾಗ ಅರ್ಬನ್‌ನವರಿಗೆ ಸಿಕ್ಕಿದರೆ ಮೂರನೇ ಒಂದು ಭಾಗ ಮಾತ್ರ ರೂರಲ್‌ನವರಿಗೆ ಸಿಕ್ಕಿದೆ. ಇದರ ಬಗ್ಗೆ ಯಾರೂ ಗಮನ ಕೊಟ್ಟಿದ್ದಾರೋ ಅಥವ ಇಲ್ಲವೋ ಎಂದು ನನಗೆ ಗೊತ್ತಾಗುತ್ತಿಲ್ಲ. ಮಾನ್ಯ ಮಂತ್ರಿಯವರು ಸರಿಯಾದ ಉತ್ತರವನ್ನು ಕೊಟ್ಟಿಲ್ಲ ಎಂಬ ದೃಷ್ಟಿಯಿಂದ ಇದನ್ನು ತೋರಿಸಿ ಬಂದಿದ್ದೇನೆ. ಅವರು ರೂರಲ್‌ನವರಿಗೆ 15ಪರ್‌ಸೆಂಟ್ ಎಕ್ಸ್‌ಟ್ರಾ ಸೀಟ್ ಕೊಟ್ಟಿದ್ದೇವೆ ಎಂದು ಹೇಳುತ್ತಾರೆ. ಹಾಗಿದ್ದರೆ ರೂರಲ್‌ನವರ ಸಂಖ್ಯೆಯು ಹೆಚ್ಚಿಗೆಯಾಗಬೇಕಾಗಿತ್ತು. ಆದರೆ ಅದು ಹಾಗೆ ಆಗಿಲ್ಲ.

ಹಾಗಿದ್ದಲ್ಲಿ ಈ ರೀತಿಯಲ್ಲಿ ರಿಸರ್‌ವೇಶನ್ ಮಾಡಲು ಬರುತ್ತದೋ ಎಂಬುದನ್ನು ಹೇಳಬೇಕು.

ಡಾ: ಎಂ.ಶಂಕರ್‌ನಾಯಕ್ (ವೈದ್ಯಕೀಯ ಶಿಕ್ಷಣ ಸಚಿವರು): ಮಾನ್ಯ ಅಧ್ಯಕ್ಷರೇ, ಹೋದ ವರ್ಷದ ಬಗ್ಗೆ ತಿದ್ದುಪಡಿಯನ್ನು ಕೂಡ ನಾವು ಕೊಟ್ಟಿದ್ದೇವೆ. ರೂರಲ್ ವಿದ್ಯಾರ್ಥಿಗಳಿಗೆ ಮಾತ್ರ, ಮಾರ್ಕ್ಸ್ ಮತ್ತು ವೈಟೇಜ್ ಕೊಟ್ಟು ಸೆಲೆಕ್ಟ್ ಮಾಡತಕ್ಕಂಥಾದ್ದು ಇದೆ. ಈ ವರ್ಷ ಅದನ್ನು ಸರಿ ಮಾಡಲಾಗಿದೆ.

ಶ್ರೀ ವೈಜನಾಥ್ ಪಾಟೀಲ್: ನಾನು ಈ ಬಗ್ಗೆ 7-8ವರ್ಷಗಳಿಂದ ಫೈಟ್ ಮಾಡಿಕೊಂಡು ಬಂದಿದ್ದೇನೆ. ಇನ್ನೂ ಸ್ಪಷ್ಟವಾದ ಪರಿಹಾರ ನಮಗೆ ದೊರೆತಿಲ್ಲ.....

ಡಾ: ಎಂ.ಶಂಕರನಾಯಕ್: ಅಧ್ಯಕ್ಷರೆ, It is a public document. We have released the matrix day before yesterday ವಿವರಗಳನ್ನು ಹೌಸ್‌ನಲ್ಲಿ ಇಡಲು ಯಾವ ಅನುಮಾನವೂ ನಮಗೆ ಇಲ್ಲ. ಇದು ಪಬ್ಲಿಕ್ ಡಾಕ್ಯುಮೆಂಟ್, ಇದನ್ನು ಎಲ್ಲರೂ ತೆಗೆದುಕೊಳ್ಳಬಹುದು. ತಮಗೆ ಅದನ್ನು ಕೊಡಿಸುತ್ತೇನೆ.

ಶ್ರೀ ಡಿ.ಆರ್.ಪಾಟೀಲ್: ಮಾನ್ಯ ಅಧ್ಯಕ್ಷರೇ, ಸನ್ಮಾನ್ಯ ಸಚಿವರಿಗೆ ಇದರ ಬಗ್ಗೆ ಏನೋ ಕನ್‌ಫ್ಯೂಶನ್ ಇದೆ. ಆದುದರಿಂದ ಅವರು ದಯವಿಟ್ಟು ಇಂಟ್ರೆಸ್ಟೆಡ್ ಲೆಜಿಸ್ಲೇಟರ್‌ಗಳ ಒಂದು ಮೀಟಿಂಗ್ ಕರೆದು, ಅಧಿಕಾರಿಗಳನ್ನು ಕೂಡ ಕರೆದು, ಚರ್ಚೆ ಮಾಡಿದರೆ ಅನುಕೂಲವಾಗುತ್ತದೆ We can sort it out. Constitution amendment is not necessary for this. ಅಡ್ಮಿನಿಸ್ಟ್ರೇಟೀವ್ ಆರ್ಡರ್ ಮಾಡಿ ಮಾಡಲು ಬರುತ್ತದೆ. ಮಹಾರಾಷ್ಟ್ರದಲ್ಲಿ ಪ್ರದೇಶವಾರು ರಿಸರ್‌ವೇಶನ್ ಮಾಡಿದರು. ನಾವು ಇಲ್ಲಿ ಕೇಳಿದರೆ ಕೋರ್ಟ್‌ನಲ್ಲಿ ಸ್ಟೇ ಆರ್ಡರ್. ನಾವು ಪ್ರದೇಶವಾರು ರಿಸರ್‌ವೇಶನ್ ಕೇಳುವುದಿಲ್ಲ. ಪ್ರದೇಶವಾರು ಅಡ್ಮಿಶನ್ ಕೇಳುತ್ತೇವೆ. ಆದ್ದರಿಂದ ತಾವುಗಳು ನಾವು ಕೇಳಿದ ಒಂದು ಮೀಟಿಂಗ್‌ನ್ನು ಕರೆಯಬೇಕು. ಅದರಲ್ಲಿ ನಾವು ಸಮಸ್ಯೆಗೆ ಪರಿಹಾರವನ್ನು ಕಂಡುಕೊಳ್ಳಬಹುದು. We can sort out in that meeting.

ಡಾ: ಎಂ.ಶಂಕರ ನಾಯಕ್: ಮಹಾರಾಷ್ಟ್ರದಲ್ಲಿ ಪ್ರದೇಶವಾರು ರಿಸರ್‌ವೇಶನ್ ಅಂದರೆ, ಅಲ್ಲಿ ಪ್ರದೇಶವಾರು ಬೋರ್ಡ್‌ನ್ನು ರಚನೆ ಮಾಡಿದ್ದಾರೆ. ತಾವುಗಳು ಸೂಚಿಸಿದ ಹಾಗೆ ಇಂಟ್ರೆಸ್ಟೆಡ್ ಲೆಜಿಸ್ಲೇಟರ್ಸ್ ಮತ್ತು ಅಧಿಕಾರಿಗಳನ್ನು ಕರೆದು ಚರ್ಚೆ ಮಾಡಲು ನನ್ನ ಅಭ್ಯಂತರವಿಲ್ಲ. ಈ ಬಗ್ಗೆ ಸರಕಾರವು ಕೂಡ ಬಹಳ ಆತುರವಾಗಿದೆ. ರೂರಲ್‌ನವರಿಗೆ ಸಹಾಯ ಮಾಡಬೇಕೆಂದು ನಮ್ಮ ಉದ್ದೇಶವೂ ಆಗಿದೆ. ನಾವೆಲ್ಲರೂ ಸೇರಿ ಅದಕ್ಕೆ ಸೂಕ್ತ ಮಾರ್ಗವನ್ನು ಕಂಡುಕೊಳ್ಳುವುದರಲ್ಲಿ ಯಾವ ತಪ್ಪೂ ಇಲ್ಲ. ನಮ್ಮ

ಕಾರ್ಯದರ್ಶಿ, ಲಾ-ಸೆಕ್ರೆಟರಿ, ಮತ್ತು ಸಂಬಂಧಪಟ್ಟವರನ್ನು ಕರೆದು ಸಭೆಯನ್ನು ಮಾಡೋಣ. ಆ ದಿನಾಂಕವನ್ನು ನಾನು ತಮಗೆ ನಾಳೆ ಹೇಳುತ್ತೇನೆ.

ಶ್ರೀ ಎಂ.ಮಲ್ಲಿಕಾರ್ಜುನ ಖಿರ್ಗೆ: ಸನ್ಮಾನ್ಯ ಅಧ್ಯಕ್ಷರೇ, ಈ ವಿಚಾರವನ್ನು ತಮ್ಮ ಗಮನಕ್ಕೆ ಏಕೆ ತರಬೇಕೆಂದರೆ, ಆರ್ಟಿಕಲ್ 371ರಲ್ಲಿ ಸ್ಪೆಶಲ್ ಪ್ರಾವಿಜನ್ ಮಾಡಲು ಅವಕಾಶವಿದೆ ಎಂದು ನಾನು ಅಭಿಪ್ರಾಯಪಡುತ್ತೇನೆ. ಪ್ರಾಂತ್ಯವಾರು ಎಂದು ಮಾಡಬಹುದು, ಅಥವಾ ಬ್ಯಾಕ್ ವರ್ಡ್ ಏರಿಯ ಎಂದು ಕೂಡ ಮಾಡಬಹುದು. ಉದಾಹರಣೆಗೆ 371ರಲ್ಲಿ ಏನು ಹೇಳುತ್ತದೆ ಅಂದರೆ, "Special provision with respect of ths State of Maharastra and Gujarat: (2) Notwithstanding anything in this Constitution, the President may by order made with respect to, provide for any special responsiblity of the Governor for-

(a) the establishment of separate development boards for Vidarabha, Marathwada, Saurashtra, Kutch and the rest of Gujarat with the provision that a report on the working of each of these boards will be placed each year before the State Legislative Assembly." ಅಂದರೆ ಇಲ್ಲಿ ಪ್ರತ್ಯೇಕ ಬೋರ್ಡ್ ಮಾಡಲು ಅವರು ಪ್ರಾವಿಜನ್ ಮಾಡಿದ್ದಾರೆ. ಇದನ್ನು 1960ರಲ್ಲಿಯೇ ಅವರು ಅಮೆಂಡ್‌ಮೆಂಟ್ ಮಾಡಿಕೊಂಡರು. ಅದೇ ರೀತಿಯಾಗಿ ತೆಲಂಗಾಣದಲ್ಲಿ ಆರ್ಟಿಕಲ್ 371-ಡಿ, ಇದರೊಳಗೆ Special provisions with respect to the State of Andhra Pradesh, even university-wise ಇದರಲ್ಲಿ ರಿಕ್ರೂಟ್‌ಮೆಂಟ್ ಮತ್ತು ಅಡ್ಮಿಶನ್‌ಗೂ ಕೂಡ ಹೇಳಿದ್ದಾರೆ. (a) require the State Government to organise any class or classes of posts in a civil serivice...." ಅಡ್ಮಿಶನ್ಸ್‌ಗೆ ಏನು ಹೇಳಿದ್ದಾರೆ (i) For direct recruitment to posts in any cadre under any local authorites within the state. (ii) for the purpose of admission to any University within the state or to any other educational institution wihich is subject to the control of the State Government. ಅಂದರೆ, ಅಂದರೆ ಎಜುಕೇಶನ್ ಇನ್‌ಸ್ಟಿಟ್ಯೂಶನ್‌ಗಳಲ್ಲಿ ಯಾವುದೇ ಯುನಿವರ್ಸಿಟಿಗೆ ತಾರತಮ್ಯ ಮಾಡುವುದಕ್ಕೆ based on priority, backward University, ಒಂದು ಯುನಿವರ್ಸಿಟಿ ಬ್ಯಾಕ್‌ವರ್ಡ್ ಇದೆ, ಅದಕ್ಕೆ ಇಂಥ ಸ್ಪೆಶಲ್ ಪ್ರಾವಿಜನ್ ಮಾಡಿ, ಅಲ್ಲಿನ ಹುಡುಗರಿಗೆ 40-50 ಪರ್‌ಸೆಂಟ್ ಎಂದು ಮಾಡುವ ಹಕ್ಕನ್ನು ಕೂಡ 371-ಡಿ, ಕೆಳಗೆ ಕೊಟ್ಟಿದ್ದಾರೆ.

ಆರ್ಟಿಕಲ್ 371ರಲ್ಲಿಯೂ ಕೂಡ ಇದೆ. ಆದರೆ ಈ ಅಮೆಂಡ್‌ಮೆಂಟ್ ಆಗಲು ಸದ್ಯಕ್ಕೆ ಸಾಧ್ಯವಿಲ್ಲ. ಅದಕ್ಕಾಗಿ ನಾವು ಸಜೆಸ್ಟ್ ಮಾಡಿದ್ದೇನೆಂದರೆ, ಪ್ರತ್ಯೇಕವಾಗಿ ನೀವು ಪಿಯುಸಿ ಬೋರ್ಡ್‌ಗಳನ್ನು ಮಾಡಿದರೆ, ಖಂಡಿತವಾಗಿ ಆ ಡಿವಿಜನ್‌ಗಳಲ್ಲಿ ಅವರಿಗೆ ಅವಕಾಶವು ಸಿಗುತ್ತದೆ. ಹಾಗೆಯೇ ಅನುಕೂಲವೂ ಆಗುತ್ತದೆ. ಅದಕ್ಕೆ ಸಂವಿಧಾನದ ತಿದ್ದುಪಡಿಯು ಬೇಕಾಗಿಲ್ಲ. ಸಂವಿಧಾನದ ತಿದ್ದುಪಡಿ ಬೇಕೆಂದಾಗ ನೀವು ಕ್ಯಾಬಿನೆಟ್‌ನಲ್ಲಿ ರೆಸಲ್ಯೂಷನ್ ಪಾಸ್ ಮಾಡಿ ಕಳುಹಿಸಿ, ಪರ್‌ಸ್ಯುವೇಶನ್ ಮಾಡಿ, ತದನಂತರ ಅದು ಪಾರ್ಲಿಮೆಂಟ್‌ನಲ್ಲಿ ಆಗಲಿ. ತಾತ್ಪೂರ್ತಿಕವಾಗಿ ನೀವು ರಿಲೀಫ್ ಕೊಡುವುದಕ್ಕೆ ಡಿವಿಜನ್‌ವೈಸ್ ಬೋರ್ಡ್‌ಗಳನ್ನು ಮಾಡಿದರೆ ಅದರಿಂದ ಖಂಡಿತವಾಗಿ ಅನುಕೂಲವಾಗುತ್ತದೆ. ನೀವು ಅದೇ ರೀತಿಯಲ್ಲಿ ಎಂಬಿಬಿಎಸ್‌ನಲ್ಲಿ ಸಿಇಟಿ ಮೂಲಕ ಕ್ರೈಟೀರಿಯಾ ಅನುಸರಿಸುತ್ತಾ ಇದ್ದೀರಿ. ಅದನ್ನು ಪೋಸ್ಟ್‌ಗ್ರ್ಯಾಜ್ಯುಯೇಟ್‌ಗೂ ಮಾಡಬೇಕು. ಅದಕ್ಕೆ ಸಂವಿಧಾನದ ತಿದ್ದುಪಡಿಯು ಬೇಕೆ? ಅದನ್ನು ಕೂಡ ನೀವು ಮಾಡುತ್ತಾ ಇಲ್ಲ. ಆದುದರಿಂದ ಅದರ ಬಗ್ಗೆ ಕೂಡ ಹೇಳಬೇಕು. ಇವೊತ್ತು ನೀವು ಸರಕಾರದಿಂದ ತೆಗೆದುಕೊಳ್ಳುತ್ತಾ ಇರುವುದೆಂದರೆ, ಬೇಕಾಗದೇ ಇರುವಂಥ ಪೋಸ್ಟ್‌ಗಳು-ಮಾತ್ರ. ಆದ್ದರಿಂದ ಪೋಸ್ಟ್‌ಗ್ರಾಜ್ಯುಯೇಶನ್ ಕೂಡ ಎಂಬಿಬಿಎಸ್‌ಗೆ ಯಾವ ಕ್ರೈಟಿರಿಯಾವನ್ನು ಫಾಲೋ ಮಾಡುತ್ತೀರೋ ಅದನ್ನು ಫಾಲೋ ಮಾಡಬೇಕು. ಇದರಿಂದ ಬಡ ವಿದ್ಯಾರ್ಥಿಗಳಿಗೆ ಅನುಕೂಲವಾಗುತ್ತದೆ. ಅವರು ಲಕ್ಷಾಂತರ ರೂಪಾಯಿಗಳನ್ನು ಖರ್ಚು ಮಾಡುವ ಸ್ಥಿತಿಯಲ್ಲಿ ಇರುವುದಿಲ್ಲ. ಪೋಸ್ಟ್-ಗ್ರ್ಯಾಜ್ಯುಯೇಟ್ ಸೀಟ್ ಒಂದೂ ಕೂಡ ಬೇರೆಯವರಿಗೆ ಸಿಕ್ಕುವುದಿಲ್ಲ.

ಶ್ರೀ ಎಂ.ವೀರಪ್ಪ ಮೊಯಲಿ: ಸನ್ಮಾನ್ಯ ಅಧ್ಯಕ್ಷರೇ, ಡಾ: ಮಲಕರೆಡ್ಡಿಯವರು ಸೀಟ್ ಅಲಾಟ್‌ಮೆಂಟ್ ಬಗ್ಗೆ ಹೇಳಿದ್ದಾರೆ. ಮೀಸಲಾತಿಯ ಬಗ್ಗೆ ವಿವರಗಳನ್ನೂ ಸರ್ಕಾರದವರು ಕೊಟ್ಟ ಅನ್ವಯ ಹೇಳಿದ್ದಾರೆ. ಯಾವ ತರಹ ಕೆಟಗರೀಸ್‌ಗೆ ಸೀಟ್ ಅಲಾಟ್‌ಮೆಂಟ್ ಮಾಡಬೇಕೆಂದು 1997-98ರ ಬಗ್ಗೆ ತಾವು 23-7-1998ರಂದು ನೀಡಿದಂಥ ಆದೇಶವನ್ನು ನಾನು ನೋಡುತ್ತಿದ್ದೆ. ನನಗೆ ಗಾಬರಿ ತಂದ ಅಂಶ ಅಂದರೆ, ರಿಸರ್‌ವೇಶನ್‌ನಲ್ಲಿ ಏನು ಮಾಡಿದ್ದೀರಿ ಅಂದರೆ, ಆಂಗ್ಲೋ ಇಂಡಿಯನ್, ಸ್ಕೌಟ್, ಡಿಫೆನ್ಸ್, ಮುಂತಾಗಿ ಆಗಿ, ಅರ್ಬನ್ ಕೆಟಗರಿ ಮತ್ತು ರೂರಲ್ ಕೆಟಗರಿ ಎಂದು ಹಾಕಿದ್ದೀರಿ. ನಾನು ಇವುಗಳು ಅಂಕಿಅಂಶಗಳು ಇರಬಹುದೆಂದು ತಿಳಿದುಕೊಂಡಿದ್ದೆ. ನೀವು ಅರ್ಬನ್‌ಗೆ ಇಷ್ಟು, ರೂರಲ್‌ಗೆ ಇಷ್ಟು ಎಂದು ಮಾಡಿದ್ದೀರಿ. I can understand weightage to be given. ಉದಾಹರಣೆಗೆ, ಮೈಸೂರು ಮೆಡಿಕಲ್ ಕಾಲೇಜ್‌ನಲ್ಲಿ ಅರ್ಬನ್‌ಗೆ 65ಸೀಟುಗಳು ಎಂದು ಹೇಳಿದ್ದೀರಿ. 11 ಸೀಟುಗಳನ್ನು ರೂರಲ್‌ಗೆ ಎಂದು ಇಟ್ಟಿದ್ದೀರಿ.

ಡಾ: ಎಂ.ಶಂಕರ್ ನಾಯಕ್: ಮಾನ್ಯ ಮೊಯಿಲಿಯವರೇ, I think clarification has been given last year. That is the last

year matrix.

SRI.M.VEERAPPA MOILY: 80% of the seats are reserved for urban only, plus merit.

ಡಾ: ಎಂ.ಶಂಕರ ನಾಯಕ್: ಮಾನ್ಯ ಅಧ್ಯಕ್ಷರೇ, ಷದಕ್ಕೆ ಹೋದ ವರ್ಷ ಕ್ಲಾರಿಫಿಕೇಶನ್ ಇಶ್ಯೂ ಮಾಡಿ ಸರಿ ಮಾಡಿದ್ದೇವೆ. There is nothing like urban and rural ಕೇವಲ ರೂರಲ್ ಸೀಟಿಗೆ ವೈಟೇಜ್ ಕೊಡತಕ್ಕಂಥಾದ್ದು ಎಂದು ಮಾಡಿದ್ದೇವೆ. ಮಾನ್ಯ ವಿರೋಧಪಕ್ಷದ ನಾಯಕರು ಹೇಳಿದ ಸಲಹೆಗಳನ್ನು ನಾನು ಸೂಕ್ತ ಎಂದು ಭಾವಿಸುತ್ತೇನೆ. ಬೋರ್ಡ್‌ನ್ನು ಪ್ರತ್ಯೇಕವಾಗಿ ರಚನೆ ಮಾಡುವುದರಿಂದ ಏನಾದರೂ ಅನುಕೂಲವಾಗುವುದಾದರೆ ಆ ಕುರಿತು ಪರಿಶೀಲಿಸೋಣ. ತಾವುಗಳು ಹೇಳಿದ ಪ್ರಕಾರ ತೆಲಂಗಾಣ ಮತ್ತು ಆಂಧ್ರಪ್ರದೇಶದಲ್ಲಿ ಏನೊಂದು ಸಮಸ್ಯೆ ಇತ್ತು, that is one of the conditions laid down. ಸೀಟುಗಳನ್ನು ಕೊಡುವಾಗ ನೇಮಕಾತಿ ಕೊಡುವಾಗ ಇಷ್ಟಿಷ್ಟು ಕೊಡಬೇಕೆಂದು ಭಾರತದ ರಾಷ್ಟ್ರಧ್ಯಕ್ಷರಿಂದಲೇ ಒಪ್ಪಿಗೆ ಪಡೆದೇ ಆಗಿರುವುದು. ತಾವೇನು ಹೇಳಿದ್ದೀರಿ, ಬೋರ್ಡನ್ನು ರಚನೆ ಮಾಡುವ ಮೂಲಕ ಏನಾದರೂ ಮಾಡಲಿಕ್ಕೆ ನಮಗೆ ಅಧಿಕಾರ ಇದ್ದರೆ ಸಂಬಂಧಪಟ್ಟ ಅಧಿಕಾರಿಗಳ ಜೊತೆ ಮಾತನಾಡಿ ಸ್ಪೆಸಿಫಿಕ್ಕಾಗಿ ಮಾಡಲಿಕ್ಕೆ ನಾವು ಕ್ರಮ ತೆಗೆದುಕೊಳ್ಳುತ್ತೇವೆ. ಪೋಸ್ಟ್ ಗ್ರಾಜುಯೇಶನದು ಅದೇ ಮಾದರಿ ಅನುಸರಿಸಲಾಗುತ್ತಿದೆ. ಅದರಲ್ಲೇನಾಗುತ್ತದೆ ಅಂದರೆ ಎಲ್ಲ ಕಾಲೇಜುಗಳಲ್ಲೂ ಪಿಜಿ ಇರುವುದಿಲ್ಲ, ಕೆಲವು ಕಾಲೇಜಿನಲ್ಲಿ ಮಾತ್ರ ಇರುತ್ತದೆ. ಅಲ್ಲೂ ಸರ್ಕಾರಿ ಕೋಟದಲ್ಲಿ ನಾವು ಪರೀಕ್ಷೆ ಕರೆದು ಸಿಇಟಿ ಮೂಲಕವೇ ಅಲಾಟ್ ಮಾಡುತ್ತಿದ್ದೇವೆ.

ಶ್ರೀ ಮಲ್ಲಿಕಾರ್ಜುನ ಖರ್ಗೆ: ನಾಯಕರೇ, ಎಲ್ಲ ಕಡೆ ಫಾಲೊ ಮಾಡುತ್ತೇವೆ ಎಂದು ಹೇಳಿದಿರಿ. ಉದಾಹರಣೆಗೆ ಉಡುಪಿ, ಡೀಮ್ಡ್ ವಿಶ್ವವಿದ್ಯಾಲಯ ಎಂದು ಮಾಡಿಕೊಂಡರು. ಅಲ್ಲಿ ಎಂಬಿಬಿಎಸ್ ಮತ್ತು ಪೋಸ್ಟ್ ಗ್ರಾಜುಯೇಶನದು ಒಂದು ಸೀಟೂ ಸಿಗುವುದಿಲ್ಲವಲ್ಲ ಅದಕ್ಕೇನು ಪ್ರಾವಿಶನ್ ಮಾಡುತ್ತೀರಿ?

ಶ್ರೀ ಎಂ.ಶಂಕರ ನಾಯಕ್: ಭಾರತ ಸರ್ಕಾರ ಡೀಮ್ಡ್ ಯೂನಿವರ್ಸಿಟಿ ಎಂದು ಮಾಡಿರುವುದು. ಅವರೇನು ಮಾಡುತ್ತಾರೆ ಅಂದರೆ, ಡೀಮ್ಡ್ ಯೂನಿವರ್ಸಿಟಿ ಎಂದು ಆದಮೇಲೆ ನಮಗೆ ಇಂಟರ್‌ಫಿಯರ್ ಆಗಲು ಅಧಿಕಾರವಿಲ್ಲ, ಅವರೇ ಎಂಟ್ರೆನ್ಸ್ ಪರೀಕ್ಷೆ ಮಾಡಿ ಸೀಟ್ ಅಲಾಟ್‌ಮೆಂಟ್ ಕಳಿಸುತ್ತಾರೆ. ನಾವು ಹೇಳುವುದು, ಯಾರಾದರೂ ಮಾಡಿಕೊಳ್ಳಲಿ ಪರವಾಗಿಲ್ಲ, ಆದರೆ ನಮಗೆ ಬರತಕ್ಕಂತಹ ಪ್ರಮಾಣವನ್ನು ನಮಗೆ ಕೊಡಬೇಕು ಎಂದು. ಅದನ್ನು ಕೇಂದ್ರಸರ್ಕಾರಕ್ಕೂ ತಿಳಿಸಿದ್ದೇವೆ.

ಶ್ರೀ ಮಲ್ಲಿಕಾರ್ಜುನ ಖರ್ಗೆ: ಕಾಲೇಜ್ ಮಾಡುವ ಉದ್ದೇಶವೇನು? ಇಲ್ಲಿನ ಮಕ್ಕಳಿಗೆ ಅವಕಾಶ ಮಾಡಿಕೊಡಬೇಕು ಎಂದು ತಾನೇ. ಅದೇ ಇರಲಿಲ್ಲ ಅಂದರೆ ಹೇಗೆ.

ಆ) ಚುಕ್ಕೆ ಗುರ್ತಿಲ್ಲದ ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡಲಾದ ಉತ್ತರಗಳು

ಶ್ರೀ ಡಿ.ಮಂಜುನಾಥ್ (ಅರಣ್ಯ ಸಚಿವರು): ಅಧ್ಯಕ್ಷರೇ 21ನೇ ಪಟ್ಟಿಯಲ್ಲಿನ ಲಿಖಿತ ಮೂಲಕ ಉತ್ತರಿಸುವ ಪ್ರಶ್ನೆಗಳ ಪಟ್ಟಿಯಲ್ಲಿರುವ 86 ಪ್ರಶ್ನೆಗಳ ಪೈಕಿ 76 ಪ್ರಶ್ನೆಗಳಿಗೆ ಉತ್ತರವನ್ನು ಸದನದ ಮುಂದೆ ಮಂಡಿಸುತ್ತಿದ್ದೇನೆ.

ತೀರ್ಥಹಳ್ಳಿ ತಾಲ್ಲೂಕು ಪಂಚಾಯಿತಿಯಲ್ಲಿನ ಅವ್ಯವಹಾರಗಳ ಕುರಿತು.

1392 (2069)

ಶ್ರೀ ಅರಗಜ್ಞಾನೇಂದ್ರ (ತೀರ್ಥಹಳ್ಳಿ): ಮಾನ್ಯ ಗ್ರಾಮೀಣಾಭಿವೃದ್ಧಿ ಪಂಚಾಯತ್‌ರಾಜ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ತೀರ್ಥಹಳ್ಳಿ ತಾಲ್ಲೂಕು ಪಂಚಾಯತಿ ಕಚೇರಿಯಿಂದ 1992ರಿಂದ 1994ರ ಅವಧಿಯಲ್ಲಿ ಮಾಡಲಾದ ದಶಲಕ್ಷಬಾವಿ, ಕಟ್ಟಡ, ವಸತಿ ಯೋಜನೆ ಕಾಮಗಾರಿಗಳಲ್ಲಿ ಹಣ ದುರುಪಯೋಗವಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಹಾಗಿದ್ದಲ್ಲಿ ಈ ಬಗ್ಗೆ ವಿಚಾರಣೆ ಏನಾದರೂ ನಡೆಯುತ್ತಿದೆಯೆ; ಹಾಗಿದ್ದಲ್ಲಿ ಎಂದಿನಿಂದ ನಡೆಯುತ್ತಿದೆ

ಇ) ಆ ಬಗ್ಗೆ ಇದುವರೆಗೆ ಯಾರಿಂದಲಾದರೂ ಹಣ ವಸೂಲು ಮಾಡಲಾಗಿದೆಯೇ; ಅಥವ ಕಾನೂನು ಕ್ರಮ ಜರುಗಿಸಲಾಗಿದೆಯೆ; ಹಾಗಿಲ್ಲದಿದ್ದಲ್ಲಿ ಅದಕ್ಕೆ ಕಾರಣಗಳೇನು.

ಈ) ತಪ್ಪಿತಸ್ಥ ಅಧಿಕಾರಿ/ಸಿಬ್ಬಂದಿ ಮೇಲೆ ಕ್ರಮ ಕೈಗೊಳ್ಳಲು ಆಗುತ್ತಿರುವ ವಿಳಂಬಕ್ಕೆ ಕಾರಣಗಳೇನು?

ಶ್ರೀ ಎಂ.ಪಿ.ಪ್ರಕಾಶ್ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು):